ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,
ಶ್ರೀರಂಗಪಟ್ಟಣ.

ಸಿ.ಸಿ.ಃ 662/2014

ಪಿ. ಡಬ್ಲ್ಯು: 02
ಸಿ. ಡಬ್ಲ್ಯು: 03

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಅನಿಲ್ ರಾಜ್ |
| ತಂದೆ/ಪತಿಯ ಹೆಸರು | ಃ | ಚಿನ್ನ ಸ್ವಾಮಿ |
| ವಯಸ್ಸು | ಃ | 39 ವರ್ಷ |
| ವೃತ್ತಿ | ಃ | ಎನ್.ಜಿ.ಓ ಕೆಲಸ |
| ವಾಸ | ಃ | ಮಹದೇವಪುರ ಗ್ರಾಮ |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 07.11.2022

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ಚಾಸಾ.1 ಗೊತ್ತು ಆತ ನಮ್ಮ ಗ್ರಾಮದವರು. ಆರೋಪಿತರು ಗೊತ್ತು ಅವರು ಸಹ ನಮ್ಮ ಗ್ರಾಮದವರು.

ಸುಮಾರು ವರ್ಷಗಳಿಂದ ಚಾಸಾ.1 ಮತ್ತು ಆರೋಪಿತರಿಗೆ ಜಮೀನು ವ್ಯಾಜ್ಯ ಇರುತ್ತದೆ. ಚಾಸಾ.01 ಹಾಗೂ ಆರೋಪಿತರ ಜಮೀನು ಅಕ್ಕಪಕ್ಕ ಇರುತ್ತದೆ. ದಿಃ 14.09.2014 ರಂದು ಅವರ ಮಧ್ಯೆ ಗಲಾಟೆಯಾಗಿದ್ದು ಅದಕ್ಕೆ ಸಂಬಂಧಿಸಿದಂತೆ ರಾತ್ರಿ 08.30 ಸಮಯಕ್ಕೆ ಮುರುಘೇಂದ್ರ ಸ್ವಾಮಿ ರವರು ಮನೆಯ ಹತ್ತಿರ ಆರೋಪಿತರು ಹೋಗಿ ಅಲ್ಲಿ ಗಲಾಟೆ ಮಾಡಿದ್ದು ಗಲಾಟೆಯಲ್ಲಿ ಚಾಸಾ.1 ರವರನ್ನು 1 ನೇ ಆರೋಪಿ ಅಡ್ಡಗಟ್ಟಿ ದೊಣ್ಣೆಯಿಂದ ಹೊಡೆದಿರುತ್ತಾರೆ. ನಂತರ ಮಹಾಲಕ್ಷ್ಮೀ ಮತ್ತು ಪ್ರಮೀಳಾ ಚಾಸಾ.1 ರವರ ಕೈಯನ್ನು ಕಚ್ಚಿರುತ್ತಾರೆ. ಸುಂದರಮ್ಮ ಚಾಸಾ.1 ರವರನ್ನು ಕುರಿತು ನಿನ್ನನ್ನು ಇಷ್ಟಕ್ಕೆ ಬಿಡಲಿಲ್ಲ ನಿನ್ನನ್ನು ಕೊಲೆ ಮಾಡುತ್ತೇವೆಂದು ಹೇಳಿರುತ್ತಾರೆ. ನಂತರ ಮುರುಘೇಂದ್ರಸ್ವಾಮಿ ರವರು ಕಬ್ಬಿಣ್ಣದ ರಾಡಿನಿಂದ ಚಾಸಾ.1 ರವರ ತಲೆಗೆ ಹೊಡೆದು ರಕ್ತಗಾಯ ಪಡಿಸಿರುತ್ತಾರೆ. ಈ ಎಲ್ಲಾ ವಿಚಾರವನ್ನು ಚಾಸಾ.1 ರವರು ನನಗೆ ಫೋನ್ ಮಾಡಿ ತಿಳಿಸಿ ಮನೆಗೆ ಬನ್ನಿ ಎಂದು ತಿಳಿಸಿದ ಕಾರಣಕ್ಕೆ ನಾನು ಅಲ್ಲಿಗೆ ಹೋಗಿರುತ್ತೇನೆ. ನಾನು ಅಲ್ಲಿಗೆ ಹೋದಾಗ ಚಾಸಾ.1 ರವರು ಹಾಕಿದ್ದ ಟಿ-ಶರ್ಟ್ ರಕ್ತಗಾಯವಾಗಿತ್ತು. ನಂತರ ನಾನು ಮತ್ತು ಚಾಸಾ.1 ರವರ ಹೆಂಡತಿ ಕಾರಿನಲ್ಲಿ ಚಾಸಾ.1 ರವರನ್ನು ಕರೆದುಕೊಂಡು ಮಂಡ್ಯ ಜಿಲ್ಲಾಸ್ಪತ್ರೆಗೆ ಚಿಕಿತ್ಸೆಗಾಗಿ ಹೋಗಿರುತ್ತೇನೆ. ನಂತರ ಅಲ್ಲಿಗೆ ಚಿಕಿತ್ಸೆ ನೀಡಿದ ವೈದ್ಯರು ಚಾಸಾ.1 ರವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ನಿಮಾನ್ಸ್

ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಸೂಚಿಸಿದರು. ನಂತರ ಖಾಸಗಿ ಆಂಬುಲೈನ್ಸ ನಲ್ಲಿ ಚಾಸಾ.1 ರವರನ್ನು ನಿಮಾನ್ಸ್ ಗೆ ಕರೆದುಕೊಂಡು ಹೋಗಿರುತ್ತೇವೆ. ನಂತರ ಅಲ್ಲಿನ ವೈದ್ಯರು ಚಾಸಾ.1 ರವರಿಗೆ ಚಿಕಿತ್ಸೆ ನೀಡಿರುತ್ತಾರೆ. ನಂತರ ದಿಃ 15.09.2014 ರಂದು ಖಾಸಗಿ ವಾಹನದಲ್ಲಿ ವಾಪಸ್ತು ಬಂದು ಅರಕೆರೆ ಪೋಲೀಸ್ ಠಾಣೆಯಲ್ಲಿ ಆರೋಪಿತರ ವಿರುದ್ಧ ಚಾಸಾ.1 ರವರು ಹೇಳಿಕೆ ನೀಡಿದ್ದಾರೆ. ಗಲಾಟೆ ಸಂಬಂಧ ನಾನೇ ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ. ಚಾಸಾ.1 ರವರ ಮೇಲೆ ಗಲಾಟೆ ಮಾಡಿದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರು ಈ ದಿನ ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದು ಅವರನ್ನು ಗುರುತಿಸುವ ಬಗ್ಗೆ ಆರೋಪಿ ಪರ ವಕೀಲರು ತಮ್ಮ ಅಭ್ಯಂತರ ಏನು ಇಲ್ಲವೆಂದು ಗುರುತಿಸಿರುತ್ತಾರೆ.

ಆರೋಪಿಯ ಬಟ್ಟೆಗಳಿಗೆ ರಕ್ತ ಅಂಟಿದ್ದು ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ರಕ್ತ ಅಂಟಿದ್ದ ಟಿ-ಶರ್ಟ್, ಬನಿಯನ್ ಮತ್ತು ಟವಲ್ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾಲು.3 ರಿಂದ 5 ಎಂದು ಗುರುತಿಸಲಾಗಿದೆ.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ**

ಆರೋಪಿ ಪರ ವಕೀಲರು ಸಾಕ್ಷಿಯ ಪಾಟಿ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ಸಕಾರಣಗಳು ಇಲ್ಲದ ಕಾರಣ ಅವರ ಮನವಿಯನ್ನು ತಿರಸ್ಕರಿಸಲಾಗಿದೆ ಮತ್ತು ಅವರ ಪರ ಸಾಕ್ಷಿಯ ಪಾಟಿ ಸವಾಲು ಏನು ಇಲ್ಲವೆಂದು ತೆಗೆದುಕೊಳ್ಳಲಾಗಿದೆ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.